† ಶ್ರೀ ಹೆಚ್. ಗಂಗಾಧರನ್ (ಕೃಷ್ಣರಾಜ).—ಮಾನ್ಯ ಅಧ್ಯಕ್ಷರೇ, ಕ್ರಿಶ್ಚಿಯನ್ ಜನಾಂಗದ ೭೦ ಕೋಟಿ ಜನರ ಧರ್ಮಗುರುಗಳಾದ ಪೋಪ್ ಪಾಲ್‌ರವರು ಶಾಂತಿಗಾಗಿ ಅಪಾರವಾಗಿ ಶ್ರಮಿಸಿ ೮೦ ವರ್ಷಗಳ ತುಂಬು ಜೀವನ ನಡೆಸಿದಂಥಾವರು ಇಂದು ನಿಧನರಾಗಿದ್ದಾರೆ. ಅವರ ನಿಧನದಿಂದಾಗಿ ಇಡೀ ಜಗತ್ತು ದುಃಖಿತಪ್ತವಾಗಿದೆ ಮತ್ತು ಇಡೀ ಕರ್ನಾಟಕ ವಿಧಾನಸಭೆ ಈಪ್ಪೊತ್ತಿನ ದಿವಸ ಅವರ ಬಗ್ಗೆ ಏನು ಒಂದು ದುಃಖಿವಮ್ನು ವ್ಯಕ್ತಪಡಿಸಿದೆ ಇದು ಬಹಳ ಸಮಯೋಚಿತವಾಗಿದೆ. ಪೋಪ್ ಪಾಲ್‌ರವರ ಜೀವನದ ಸಾಧನೆ ಅತ್ಯಂತ ಅಮೂಲ್ಯವಾದುದು ಎಂದು ಹೇಳುತ್ತೇನೆ. ಹೇಗೆಂದರೆ, ಜಗತ್ತಿನಲ್ಲಿ ಇಬ್ಬಣ ಆದ ಕಾಲದಲ್ಲಿ ಅವರು ಹೆಚ್ಚಿನ ಒದು ಪಾತ್ರವನ್ನು ವಹಿಸಿ ಆ ಇಬ್ಬಣವನ್ನು ಒಂದುಗೂಡಿಸಿ ಇಡೀ ಜಗತ್ತಿನಲ್ಲಿ ಶಾಂತಿಯನ್ನು ಸ್ಥಾಪಿಸುವುದಕ್ಕೆ ಸಾಧನೆ ಮಾಡಿದಂಥಾ ಶಾಂತಿ ಪುರಷರು. ಈ ಇಬ್ಬಣ ಕಾಲದಲ್ಲಿ ಧರ್ಮಕ್ಕೆ ದೂರ ಇದ್ದರೂ ಕೂಡ ಅವರು ರಾಷ್ಟ್ರದ ಒಂದು ನಾಯಕತ್ವವನ್ನು ವಹಿಸಿ ರಷ್ಯಾದ ನಾಯಕರುಗಳಿಗೂ ಕೂಡ ಧರ್ಮಗುರುಗಳಾಗಿ ಪೋಪ್ ಪಾಲ್‌ರವರು ಮಾಡಿದಂಥಾ ಕೆಲಸ ಬಹಳ ಅಪಾರವಾದುದು. ಅವರು ಈರೀತಿಯಾಗಿ ಹೋರಾಡಿ ಈ ಧರ್ಮದ ಒಂದುಪ್ರತಿಭೆ ಎಷ್ಟರಮಟ್ಟಿಗೆ ಈ ಮಾನವ ಜನಾಂಗದ ಮೇಲೆ ಆಗುತ್ತದೆ ಎನ್ನುವುದನ್ನು ಅವರು ವ್ಯಕ್ತಪಡಿಸಿ ಅವರ ಮನಸ್ಸನ್ನು ಶಾಂತಿಗೊಳಿಸಿ ಮತ್ತು ಅವರು ಧರ್ಮದ ಬಗ್ಗೆ ತಮ್ಮ ಪ್ರಭಾವ ಬೀರಿದ್ದಾರೆ. ಅಂಥಾ ವ್ಯಕ್ತಿ ಈಪ್ಪೊತ್ತಿನ ದಿವಸ ನಮ್ಮ ಕಣ್ಣುಮುಂದೆ ಇಲ್ಲದವರಾಗಿದ್ದಾರೆ.

ಜೊತೆಗೆ ಭಾರತದಲ್ಲಿ ನಡೆದಂಥ ಅನೇಕ ದುರ್ಘಟನೆಗಳಲ್ಲಿ ಸಂಪೂರ್ಣವಾದ ಆರ್ಥಿಕ ಸಾಮಾಜಿಕ ಸಹಾಯವನ್ನು ಒದಗಿಸಿದಂಥ ಮಹಾಪುರುಷರು ಇಂದು ಕಣ್ಮರೆಯಾಗಿದ್ದಾರೆ. ಹಾಗೇನೇ ಅವರ ಜೀವನ ಮೌಲ್ಯವನ್ನು ನಾವು ನೋಡುವುದಾದರೆ ಅವರು ಮೊನ್ನೆ ದಿವಸ ನಿಧನರಾಗುವುದಕ್ಕೆ ಮುನ್ನ ಅವರು ಬರೆದಿಟ್ಟ ಮರಣ ಶಾಸನವನ್ನು ನೋಡಿದಾಗ ಗೊತ್ತಾಗುತ್ತದೆ. ನನ್ನ ಅಂತ್ಯಕ್ರಿಯೆ ಅತ್ಯಂತ ಸರಳವಾಗಿರಬೇಕು ನನಗೆ ಯಾವುದೇ ಸ್ಮಾರಕಗಳನ್ನು ರಚನೆ ಮಾಡಬಾರದೆಂದು ಬರೆದಿಟ್ಟು ಹೋಗಿದ್ದಾರೆ ಇವತ್ತು ಭಾರತ ಸರ್ಕಾರದವರು ಅವರ ಸೇವೆಯನ್ನು ಸಮರ್ಥನೆ ಮಾಡಿಕೊಳ್ಳುವ ಸಲುವಾಗಿ ಭಾರತದ ಎಲ್ಲಾ ಸರ್ಕಾರಿ ಕಛೇರಿಗಳ ಮೇಲೆ ತನ್ನ ರಾಷ್ಟ್ರಧ್ವಜವನ್ನು ಅರ್ಧದವರೆಗೆ ಹಾರಿಸಬೇಕೆಂದು ನಿರ್ಣಯ ಮಾಡಿ ಇಡೀ ಭಾರತದ ಜನತೆಯ ಅನುತಾಪವನ್ನು ವ್ಯಕ್ತಪಡಿಸುವ ಸೂಚನೆ ಕೊಟ್ಟಿದ್ದಾರೆ. ಜಗತ್ತಿನ ಮಹಾನ್‌ವ್ಯಕ್ತಿ ಎನ್ನಿಸಿಕೊಂಡಿದ್ದಂಥ ಪೋಪ್‌ಪಾಲ್‌ರವರ ನಿಧನಕ್ಕೆ ನನ್ನ ಸಂತಾಪವನ್ನು ಸೂಚಿಸಿ ಅವರ ಆತ್ಮಕ್ಕೆ ಶಾಂತಿ ಕೋರಿ ದುಃಖಿತಪ್ತರಾದ ಅವರ ಮನೆಯವರಿಗೆ ಇಡೀ ಭಾರತ ದೇಶದ ಜನಾಂಗದ ಪರವಾಗಿ ಸಹಕಾರ ವ್ಯಕ್ತಪಡಿಸಿ ನನ್ನ ಈ ಸಂತಾಪವನ್ನು ಸೂಚಿಸಬಯಸುತ್ತೇನೆ.

MR. SPEAKER.—I associate myself with the feelings expressed by the Hon'ble the Leader of the house, Hon'ble the Leader of the opposition and other members of this house. I pray almighty to give peace to the departed soul.

I request the hon. members to stand in silence for a minute as a mark of respect to the departed soul.

(The House stood in silence for a minute)

STARRED QUESTIONS

(to which oral answers were given)

Decrease in production in Textile Mills due to power cut

245. SRI B. V. KAKKILAYA (Vittal).—Will the Minister for Industries and Commerce be pleased to state.—

(a) in how many Textile Mills has the production decreased due to power cut in the State ;

(b) what is the quantity of decrease ;

(c) what ie the help extended by the Government to these Mills to overcome the power shortage ;

(d) the number of workers thrown out of employment due to the above reason ;

(e) what is the action taken to give compensation to these workers ?

SRI H. C. SREEKANTIAH (Minister for Municipal Administration) [on behalf of SRI AZEEZ SAIT (Minister for Industries and Commerce)].—

(a) Production has decreased in 18 Textile Mills in the State.

(b) From 15 per cent to 49 per cent.

(c) Power from Neyveli has been supplied on higher tariff.

(d) No unemployment has been caused due to the imposition of power cut.

(e) Does not arise.

ಶ್ರೀ ಬಿ. ವಿ. ಕಕ್ಕಿಲಾಯ.—ಸ್ವಾಮಿ, ಲೇ ಆಫ್ ಆಗಿ ಎಷ್ಟು ಜನರನ್ನು ರಿಟ್ರೆಂಜ್ ಮಾಡಿದ್ದಾರೆ? ಆ ರೀತಿ ಮಾಡಿದುದರಿಂದ ಉತ್ಪತ್ತಿ ಕಡಿಮೆಯಾಗಿದೆ ಇದರ ಬಗ್ಗೆ ನಿಮ್ಮಲ್ಲಿ ಏನಾದರೂ ಮಾಹಿತಿ ಇದೆಯೇ ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಆ ವಿಷಯ ನನ್ನಲ್ಲಿ ಇಲ್ಲ. ಆ ರೀತಿಯ ಯಾವ ದೂರುಗಳೂ ಸಹ ನಮಗೆ ಬಂದಿಲ್ಲ. ನಮ್ಮಲ್ಲಿ ೨೨ ಮೇಜರ್ ಟೆಕ್ಸ್‌ಟೈಲ್ ಮಿಲ್‌ಗಳು ಇದೆ. ಆದರೆ ಅದರಲ್ಲಿ ಎರಡು ಮಾತ್ರ ಕಂಪ್ಲೀಟ್ ಆಗಿ ನಿಂತುಹೋಗಿವೆ. ಅದಕ್ಕೆ ನಾನಾ ಕಾರಣಗಳಿವೆ. ಉಳಿದ ೨೦ ಮಿಲ್‌ಗಳಲ್ಲಿ ಪವರ್ ಕಟ್‌ನಿಂದ ಕೆಲಸ ಮಾಡತಕ್ಕಂಥ ಉದ್ಯೋಗಿಗಳನ್ನು ತೆಗೆದು ಹಾಕಿದ್ದಾರೆ ಎನ್ನುವ ದೂರು ಸರ್ಕಾರಕ್ಕೆ ಇಲ್ಲಿಯವರೆಗೆ ಬಂದಿಲ್ಲ.

ಶ್ರೀ ಬಿ. ವಿ. ಕಕ್ಕಿಲಾಯ.—ನೈವೇಲಿಯಿಂದ ಪವರ್ ತೆಗೆದುಕೊಂಡು ಒಂದು ಪವರ್ ಕೊಟ್ಟಿದ್ದೇವೆಂದು ಹೇಳಿದ್ದೀರಿ, ಎಷ್ಟು ಟೆಕ್ಸ್‌ಟೈಲ್ ಮಿಲ್‌ಗಳಿಗೆ ಪವರ್ ಒದಗಿಸಿದ್ದೀರಿ ಎನ್ನುವುದನ್ನು ಹೇಳುತ್ತೀರಾ ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ನೈವೇಲಿಯಿಂದ ಪವರ್ ಹೆಚ್ಚಿಗೆ ಬೇಕು ಎಂದು ಕೇಳಿದ ಮಿಲ್‌ಗಳವರೆಲ್ಲರಿಗೂ ಕೊಟ್ಟಿದ್ದೇವೆ.

ಶ್ರೀ ಬಿ. ವಿ. ಕಕ್ಕಿಲಾಯ.—ಈ ವರ್ಷ ಮಳೆ ಹೆಚ್ಚಾಗಿಯೇ ಬಿದ್ದಿದೆ ಆದುದರಿಂದ ಈ ವರ್ಷ ವಾದರೂ ಟೆಕ್ಸ್‌ಟೈಲ್ ಮಿಲ್‌ಗಳಿಗೆ ತಾವು ಏನು ಪವರ್ ಕಟ್ ಮಾಡಿದ್ದೀರಿ ಆದನ್ನು ಸಂಪೂರ್ಣವಾಗಿ ತೆಗೆದುಹಾಕಿ ಮಿಲ್‌ಗಳು ಹೆಚ್ಚಿನ ಉತ್ಪಾದನೆ ಮಾಡಲು ಅನುಕೂಲ ಮಾಡಿಕೊಡುತ್ತೀರಾ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಸರ್ಕಾರ ಈಗಾಗಲೇ ಎಲ್ಲಾ ಕೈಗಾರಿಕೆಗಳಿಗೂ ಸಹ ಪವರ್ ಕಟ್‌ನ್ನು ಕಡಿಮೆ ಮಾಡಿದೆ.

ಶ್ರೀ ಪಂಪಾಪತಿ.—ನಮ್ಮ ರಾಜ್ಯದಲ್ಲಿ ಎಷ್ಟು ಗಿರಣಿಗಳು ಇವೆ? ಎಷ್ಟು ಗಿರಣಿಗಳಲ್ಲಿ ಉತ್ಪಾದನೆ ಕಡಿಮೆಯಾಗಿದೆ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ನಮ್ಮ ರಾಜ್ಯದಲ್ಲಿ ೨೨ ಮೇಜರ್ ಮಿಲ್‌ಗಳು ಇವೆ. ಅದರಲ್ಲಿ ಎರಡು ಕೆಲಸ ಮಾಡುತ್ತಿಲ್ಲ.

ಶ್ರೀ ಎಂ. ಚಂದ್ರಶೇಖರ್.—ನೈವೇಲಿಯಿಂದ ಪವರ್ ತೆಗೆದುಕೊಂಡಾಗ ಅದು ಗ್ರಿಡ್‌ಗೆ ಬಂದು ಅಲ್ಲಿಂದ ಎಲ್ಲಾ ಕೈಗಾರಿಕೆಗಳಿಗೂ ಸಪ್ಲೈ ಆಗಬೇಕು. ಆದರೆ ತಾವು ನೈವೇಲಿಯಿಂದ ಪವರ್ ತೆಗೆದು ಕೊಂಡು ಸಪರೇಟ್ ಆಗಿ ಹೇಗೆ ಸಪ್ಲೈ ಮಾಡಿದಿರಿ ಎಂಬುದನ್ನು ತಿಳಿಸುತ್ತೀರಾ?

ಶ್ರೀ ಎಚ್.ಸಿ. ಶ್ರೀಕಂಠಯ್ಯ.—ಆ ಪ್ರಶ್ನೆಯನ್ನು ವಿದ್ಯುಚ್ಛಕ್ತಿ ಮಂತ್ರಿಗಳವರಲ್ಲಿ ಕೇಳಿದರೆ ಅವರು ಸೂಕ್ತವಾದ ಉತ್ತರವನ್ನು ಕೊಡುತ್ತಾರೆ.

Raising the height of the Gajanur Dam in Shimoga Taluk

512. SRI SHEERNALY CHANDRASHEKAR (Hosanagar).— Will the Chief Minister be pleased to state :

(a) whether there was any proposal to raise the height of the Gajanur dam in Shimoga Taluk by ten feet;

(b) whether it is a fact that the proposal is dropped ;

(c) if so, the reasons;

(d) whether Government intends to revise its decision and take immediate steps to raise the height of the Gajanur dam immediately ?

SRI D. DEVARAJ URS (Chief Minister).—

(a) No.

(b) No.

(c) Does not arise

(d) Since the proposal is not dropped, this does not arise.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಸ್ವಾಮಿ, ತಾವು ಕೊಟ್ಟಿರತಕ್ಕ ಉತ್ತರದಲ್ಲಿ ಬಹಳ ದ್ವಂದ್ವವಿದೆ. ನನ್ನ 'ಆ' ಪ್ರಶ್ನೆಗೆ ಉತ್ತರದಲ್ಲಿ ಇಲ್ಲವೆಂದು ಹೇಳಿದ್ದೀರಿ.

ಅಧ್ಯಕ್ಷರು.—ತಮಗೆ ಏನು ಪ್ರಶ್ನೆ ಬೇಕು ಅದನ್ನು ನೇರವಾಗಿ ಕೇಳಿ ಉತ್ತರದಲ್ಲಿ ಸರಿಯಾಗಿಲ್ಲ, ದ್ವಂದ್ವವಾಗಿದೆ, ಹಾಗೆ ಹೀಗೆ ಅಂತ ಹೇಳುವುದು ಬೇಡ ನಿಮಗೇನು ಬೇಕು ಅದನ್ನು ಕೇಳಿ.

†ಶ್ರೀ ಡಿ. ದೇವರಾಜ್ ಅರಸ್.—ಗಾಜನೂರು ಆಣೆಕಟ್ಟೆಯನ್ನು ೧೦ ಅಡಿ ಎತ್ತರಕ್ಕೆ ಎತ್ತರಿಸುವ ಸಲಹೆ ಏನಾದರೂ ಇದೆಯೇ ಎಂದು ಕೇಳಿದ್ದಕ್ಕೆ ಕೈ ಬಿಟ್ಟಿಲ್ಲವೆಂದು ಹೇಳಿದ್ದೇವೆ. ಅದನ್ನು ೧೦ ಅಡಿನೋ ೧೫ ಅಡಿನೋ, ೮ ಅಡಿನೋ ಎತ್ತರಿಸುವ ಸಲಹೆ ಇದೆಯೇ ಎಂದು ಕೇಳಿದ್ದಕ್ಕೆ ಇಲ್ಲವೆಂದು ಹೇಳಿದ್ದೇನೆ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಈ ಗಾಜನೂರು ಅಣೆಕಟ್ಟೆಯನ್ನು ಎತ್ತರಿಸಬೇಕು ಎನ್ನುವ ಬಗ್ಗೆ ಸುಮಾರು ೨೫ ವರ್ಷಗಳ ಹಿಂದೆಯೆ ಯೋಜನೆ ಹಾಕಿದ್ದರೂ ಇಲ್ಲಿಯವರೆಗೆ ಆ ಕೆಲಸ ವಾಗಿಲ್ಲ, ಅದಕ್ಕೆ ತಾವು ಏನಾದರೂ ಯೋಜನೆ ಹಾಕಿ ಆ ಕೆಲಸವನ್ನು ಮಾಡುತ್ತೀರಾ ?

ಶ್ರೀ ಡಿ. ದೇವರಾಜ್ ಅರಸ್.—ಅದನ್ನು ಕೈ ಬಿಟ್ಟಿಲ್ಲ, ಅದಕ್ಕೆ ಕಾರಣವಿಷ್ಟೆ ಅದಕ್ಕೆ ಮಧ್ಯೆ ತಡೆ ಬಂದಾದು ಏನೆಂದರೆ ಕೃಷ್ಣಾ ವ್ಯಾಲಿ ವಾಟರ್ ಡಿಸ್ಪ್ಯೂಟ್ ಈಗ ಏನು ಒಂದು ಸೆಟ್ಲಮೆಂಟಿಗೆ ಬಂದಿದೆ, ಆದುದರಿಂದ ನಾವು ಅದನ್ನು ಅಷ್ಟು ಉಪಯೋಗ ಮಾಡುವುದಕ್ಕೆ ಸಾಧ್ಯವಿಲ್ಲ. ನಮಗೆ ಸ್ವಲ್ಪ ಹೆಚ್ಚು ಕಡಿಮೆ ೭೦–೮೦ ಟಿ.ಎಂ.ಸಿ.ಎಫ್.ಟಿ. ವಾಟರ್ ಲಿಫ್ಟ್ ಇರಿಗೇಷನ್ ಮೂಲಕ ವ್ಯವಸ್ಥೆ ಮಾಡ ಬೇಕೆಂದು ಇದೆ. ಅದಕ್ಕಾಗಿ ಮೂರು ಜಾಗಗಳನ್ನು ನೋಡಿದ್ದೇವೆ, ಅದು ಮೊದಲನೆಯದಾಗಿ ಗಾಜ ನೂರು, ಎರಡನೆಯದು ಭೈರನ ಪಾಡು, ಮೂರನೆಯದು ಸಿಂತಾನೂರ್. ಅದುದರಿಂದ ನಾವು ಅದನ್ನು ಕೈಬಿಡುವುದಿಲ್ಲ. ಅದನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ.